# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ

ಸ್ವಾಮಿ ವಿವೇಕಾನಂದರು ಬಾಲ್ಯದಲ್ಲಿ ಒಮ್ಮೆ ತಮ್ಮ ತಂದೆಯ ಬಳಿ ನಿಂತು "ಅಪ್ಪಾ! ನನಗಾಗಿ ನೀನು ಏನೇನು (ಆಸ್ತಿ) ಮಾಡಿದ್ದೀಯೆ?" ಎಂದು ಪ್ರಶ್ನಿಸಿದರಂತೆ. ವಿಶ್ವನಾಥ ದತ್ತರು ನಗುತ್ತ ತಟ್ಟನೆ ಹೇಳಿದರಂತೆ, "ಕನ್ನಡಿಯೆದುರು ನಿಂತು ನೋಡು" ಎಂದು. ನರೇಂದ್ರ ಕನ್ನಡಿಯ ಮುಂದೆ ನಿಂತಾಗ ಕಂಡ ಆಸ್ತಿಯಾದರೂ ಏನು? ತೇಜಃಪುಂಜವಾದ ಕಣ್ಣುಗಳು, ದಿಟ್ಟ ನಿಲುವು, ಏನು ಬಂದರೂ ಎದೆಯೊಡ್ಡಿ ಎದುರಿಸಬಲ್ಲೆ ಎಂಬಂಥ ಹರವಾದ ಎದೆ, ಎಂಥವರನ್ನೂ ತನ್ನೆಡೆಗೆ ಸೆಳೆಯ ಬಲ್ಲ ಆಕರ್ಷಕ ಮುಖಭಾವ, ವಿಶ್ವವನ್ನೇ ಗೆಲ್ಲಬಲ್ಲ ಆತ್ಮ ವಿಶ್ವಾಸ! ಇವೇ ತಂದೆಯಾದ ವಿಶ್ವನಾಥ ದತ್ತ ಮಗನಾದ ನರೇಂದ್ರನಿಗೆ ಕಾಣಲು ಹೇಳಿದ ಆಸ್ತಿಗಳು.

ನಿಜ. ಎಲ್ಲರೂ ತಮ್ಮ ಮಕ್ಕಳ ಸುಖಕ್ಕಾಗಿ ಹಲವಾರು ಬಗೆಯ ಆಸ್ತಿ ಸಂಪಾದಿಸುತ್ತಾರೆ. ಆದರೆ ಮಕ್ಕಳೇ ತಮ್ಮ ಆಸ್ತಿ ಎಂದು ಎಷ್ಟು ಜನ ತಿಳಿಯುತ್ತಾರೆ? ಈ ಆಸ್ತಿಯ ಸಫಲತೆ ಯನ್ನು ಕಾಪಾಡಲು ಋಷಿಮುನಿಗಳ ಪರಿಶುದ್ಧ ಜೀವನ, ಕಾಲ ಮಾನಕ್ಕೆ ತಕ್ಕ ಶಿಸ್ತು, ಪ್ರಾಮಾಣಿಕತೆಯ ಸಾವಯವ ಗೊಬ್ಬರ ನೀಡಬೇಕು. ಮಣ್ಣಿನ ಮುದ್ದೆಯಂತಿರುವ ಮಕ್ಕಳ ಮನಸ್ಸಿಗೆ ಯಾವ ಆಕಾರವನ್ನಾದರೂ ಕೊಡಬಹುದು. ಆದರೆ ಮುಖ್ಯ ವಾಗಿ ಬೇಕಾದ್ದು ತಂದೆ-ತಾಯಿಗಳ ಕಾಳಜಿ, ತಾಳ್ಮೆ ಮತ್ತು ಸಮಯ. ಮಕ್ಕಳ "ಏಕೆ" "ಹೇಗೆ"ಗಳಿಗೆ ಸಮಂಜಸವಾಗಿ ಉತ್ತರ ನೀಡಬೇಕು. ನಿರ್ದಿಷ್ಟ ಸಮಯವನ್ನು ಮಕ್ಕಳಿಗಾಗಿ ಮೀಸ ಲಾಗಿಡಬೇಕು.

—ಶ್ರೀಮತಿ ವಸುಂಧರಾ ರಾ. ಭಟ್ಟ,
ಮಾಗೋಡ ಕಾಲೋನಿ, ಯಲ್ಲಾಪುರ.

"ಮಕ್ಕಳು ಬಾಳನಂದನದ ಮಂದಾರ ಕುಸುಮಗಳು". ಈ ಕುಸುಮಗಳು ಸುಂದರವಾಗಿ ಅರಳಿ ಮಧುತುಂಬಿ ಸುವಾಸನೆ ಯನ್ನು ಚೆಲ್ಲಬೇಕಾದರೆ ತಂದೆತಾಯಿಗಳು ಪ್ರೀತಿ, ಪ್ರೇಮ, ವಾತ್ಸಲ್ಯದ ಮಧು ಎರೆದು ನೇವರಿಸಬೇಕು. ಮಕ್ಕಳ ಮನಸ್ಸು ಹೂನಷ್ಟೆ ಮೃದು. ಸ್ವಲ್ಪ ಘಾಸಿಯಾದರೂ ಅದು ಮುದುಡು ತ್ತದೆ. ಆಗ ಪ್ರಗತಿಗಿಂತ ವಿಗತಿಯತ್ತ ಸಾಗುತ್ತದೆ. ನಲುಗದಂತೆ ಅತಿ ನವುರಾಗಿ ತಿದ್ದಿ ತೀಡಬೇಕು. ಮಗು ಈ ಜಗತ್ತಿಗೆ ಬಂದಾಗಿನಿಂದ ಹೊಸಹೊಸ ಸಂಗತಿಗಳನ್ನು ಕಲಿಯುತ್ತಲೇ ಬೆಳೆ ಯುತ್ತದೆ. ನಾವು ಮಗುವಿಗೆ ಕಲಿಸುವುದಕ್ಕಿಂತ ಮಗುವಿನಿಂದ ಕಲಿಯುವುದೇ ಹೆಚ್ಚಾಗಿರುತ್ತದೆ. ಆದುದರಿಂದಲೇ ಜ್ಞಾನಿಯೊಬ್ಬ "Child is the father of man" (ಮಗು ಮಾನವನ ತಂದೆ) ಎಂದು ಉದ್ಗಾರವೆಳೆದಿದ್ದಾನೆ. ಮಗುವಿಗೆ ಕಲಿಸುವುದಕ್ಕಿಂತ ಮಗುವಿಗೆ ಏನನ್ನು ಕಲಿಸಬೇಕು ಎಂಬುದನ್ನು ನಾವು ಮೊದಲು ಕಲಿಯಬೇಕಾಗಿದೆ. ಪ್ರತಿಯೊಂದು ಚೇತನದಲ್ಲೂ "ದೈವಿಕತೆ" ಎಂಬುದು ಸುಪ್ತವಾಗಿಯೂ ಗುಪ್ತವಾಗಿಯೂ ಅಡಕವಾಗಿರು ತ್ತದೆ. ಅದು ವಿಕಾಸಗೊಳ್ಳುವಂತೆ ಜಾಗರೂಕತೆ ವಹಿಸುವುದು ಅತಿ ಮುಖ್ಯವಾದುದು. ಪ್ರತಿ ಶಿಶುವೂ ತನ್ನದೇ ಆದ ಸಂಸ್ಕಾರ ವನ್ನು ಹೊತ್ತುತಂದಿರುತ್ತದೆ. ಅದರಲ್ಲಿ ಒಳ್ಳೆಯ ಸಂಸ್ಕಾರಗಳು ವಿಕಾಸ ಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು, ಕೆಟ್ಟ ಸಂಸ್ಕಾರ ಗಳಿದ್ದರೆ ಅವುಗಳನ್ನು ತ್ಯಜಿಸುವಂತೆ ಮಾಡಬೇಕು. ಆದರೆ ಎಲ್ಲಿಯೂ ತಂದೆತಾಯಿಗಳು ತಮ್ಮ ಭಾವನೆಗಳನ್ನು ಮಕ್ಕಳ ಮೇಲೆ ಹೇರ ಬಾರದು. ಸಾಮಾನ್ಯವಾಗಿ ತಂದೆತಾಯಿಗಳು ತಮ್ಮ ಮಗು ಐನ್‌ಸ್ಟೈನ್, ರಾಮನ್, ವಿಶ್ವೇಶ್ವ ರಯ್ಯ, ಲಿಂಕನ್, ಟಾಗೂರ್ ಇತ್ಯಾದಿ ಇತ್ಯಾದಿ ಆಗಬೇಕೆಂದು ಕನಸು ಕಟ್ಟುತ್ತಾರೆ. ತಾವು ಸಾಧಿಸಲಾಗದ್ದನ್ನು ತಮ್ಮ ಮಕ್ಕಳು ಸಾಧಿಸಬೇಕೆಂದು ಬಯಸುತ್ತಾರೆ. ತಮ್ಮ ಅತೃಪ್ತ ಕನಸುಗಳನ್ನು ತಮ್ಮ ಮಕ್ಕಳ ಮೂಲಕ ಪಡೆಯಲು ಹಂಬಲಿಸುತ್ತಾರೆ. ಇಂದಿನ ಶಾಲೆಗಳು ಜ್ಞಾನ ಗಂಗೋತ್ರಿಗಳಾಗುವ ಬದಲು ಸಿದ್ಧ ವಸ್ತುಗಳನ್ನು ಸರಬರಾಜು ಮಾಡುವ ಕಾರ್ಖಾನೆಗಳಂತಾಗಿವೆ.

**ಮಕ್ಕಳು ನಿಮ್ಮ ಇಚ್ಛಾಪೂರ್ತಿಗೆ ಇರುವುದಲ್ಲ, ಸಮಾಜದ ಆವಶ್ಯಕತೆಯ ಪೂರೈಕೆಗೆ ಇರುವುದು.**

ತಾಯಿಯೊಬ್ಬಳು ಮೊದಲ ದಿನ ತನ್ನ ಶಿಶುವನ್ನು ಶಾಲೆಗೆ ಕಳುಹಿಸಲು ಸಿಂಗರಿಸುತ್ತಾಳೆ. ಮಗು ಆನಂದದಿಂದಲೇ ಅಲಂಕಾರ ಗೊಳ್ಳುತ್ತದೆ. ಹೊಸ ಶೂ, ಸಾಕ್ಸ್, ಯೂನಿಫಾರಂ ಇತ್ಯಾದಿ ಗಳಿಂದ ಮುದಗೊಳ್ಳುತ್ತದೆ. ತಾಯಿ ಪುಸ್ತಕಗಳೆಂಬ ಮೂಟೆ ಯನ್ನು ಮಗುವಿನ ಬೆನ್ನಮೇಲೆ ಹೇರಿ ಶಾಲೆಗೆ ತಳ್ಳುತ್ತಾಳೆ. ಸಂಜೆ ಹೆಣಭಾರದ ಪುಸ್ತಕದ ಮೂಟೆಯನ್ನು ಹೊತ್ತ ಮಗು ಸುಸ್ತಾಗಿ, ಬಸವಳಿದು, ಬಳಲಿ ಮನೆಗೆ ಬರುತ್ತದೆ. ಹಾಗೆ ಬಂದ ಮಗು ಕೇಳುತ್ತದೆ "ಅಮ್ಮ ನಾನು ಇನ್ನೆಷ್ಟು ದಿನ ಈ ಪುಸ್ತಕದ ಮೂಟೆ ಹೊರಬೇಕು?" ಎಂದು. ತಾಯಿ ಹೇಳುತ್ತಾಳೆ: "ಇನ್ನೂ ೨೫ ವರ್ಷಗಳು; ನೀನು ಮದುವೆ ಆಗುವವರೆಗೆ." ಮಗು ಹೇಳುತ್ತದೆ : "ಹಾಗಾದರೆ ನಾಳೆಯೇ ನನ್ನ ಮದುವೆ ಮಾಡಿ ಬಿಡಮ್ಮ."

ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭ. ನಮ್ಮ ಉಪನ್ಯಾಸಕರೊಬ್ಬರಿಗೆ ಸಿಗರೇಟು ಸೇದುವ ಚಟವಿತ್ತು. ನಾನೊಮ್ಮೆ ಅವರ ಮನೆಗೆ ಹೋಗಿದ್ದೆ. ಅವರು ತಮ್ಮ ಕೊಠಡಿಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಧೂಮಲೀಲೆಯಲ್ಲಿ ತೊಡಗಿದ್ದರು. ನಾನು "ಏಕೆ ಹೀಗೆ?" ಎಂದು ಕೇಳಿದೆ.

ಅವರೆಂದರು: "ಹೊರಗಡೆ ಮಗು ಆಡುತ್ತಿದೆ, ಅದಕ್ಕೆ ತಿಳಿಯಬಾರದು ಎಂದು ಈ ವ್ಯವಸ್ಥೆ." ಕ್ರಮೇಣ ಮಗು ಬೆಳೆದಂತೆ ಇವರು ಸಿಗರೇಟು ಸೇದುವುದನ್ನೆ ಬಿಟ್ಟರು. ಈ ಎಚ್ಚರಿಕೆ ತಂದೆ ತಾಯಿಗಳಿಗೆ ಬೇಕಾಗುತ್ತದೆ.

—ಡಿ.ಕೆ. ಈರೇಗೌಡ.
ನಿವೃತ್ತ ಉಪನಿರ್ದೇಶಕರು, ಪ್ರಸಾರಾಂಗ, ಮೈಸೂರು.

ಇತ್ತೀಚಿನ ದಿನಗಳಲ್ಲಿಯಂತೂ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾಗಿರುವುದು ತಂದೆತಾಯಿಗಳ ಹೆಚ್ಚಿನ ಜವಾಬ್ದಾರಿಯಾಗಿದೆ. ಈಗಿನ ಮಕ್ಕಳು ಪಾಶ್ಚಾತ್ಯ ಸಂಸ್ಕೃತಿಗೆ ಹೆಚ್ಚು ಮಾರುಹೋಗುತ್ತಾರೆ. ಅಲ್ಲದೆ ದೂರದರ್ಶನದ ಹಾವಳಿ ಹೆಚ್ಚಾಗಿದೆ. ಇವುಗಳ ಬಗ್ಗೆ ಕಾಳಜಿ ವಹಿಸಿ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಬಗ್ಗೆ ತಿಳಿಸಿ ಹೇಳುವುದು ಪ್ರತಿಯೊಬ್ಬ ತಂದೆ ತಾಯಿಗಳ ಆದ್ಯ ಕರ್ತವ್ಯ. ಕೆಲವೊಂದು ಸಲ ತಾಯಿಯರೇ ಮೊದಲು ತಮ್ಮನ್ನು ತಾವು ಪರೀಕ್ಷಿಸಿಕೊಂಡು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಯಾಕೆಂದರೆ ಮೊದಲು ಅವಿಭಕ್ತ ಕುಟುಂಬಗಳು ಹೆಚ್ಚಾಗಿರುತ್ತಿದ್ದವು. ಆಗ ಮಕ್ಕಳಿಗೆ ಮನೆಯಲ್ಲಿಯ ಅಜ್ಜ-ಅಜ್ಜಿಯರು ಒಳ್ಳೆಯ ಆದರ್ಶವ್ಯಕ್ತಿಗಳ ಕಥೆಗಳನ್ನೂ ಹಾಡುಗಳನ್ನೂ ಹೇಳಿಕೊಡುತ್ತಿದ್ದರು. ಈಗ ಅದು ಕಡಿಮೆಯಾಗಿದೆ. ಈಗಿನ ತಂದೆತಾಯಿಗಳಿಬ್ಬರೂ ನೌಕರಿ ಮಾಡುವವರಿದ್ದರೆ ಮಕ್ಕಳ ಕಡೆಗೆ ಗಮನ ಹರಿಸುವುದು ಆಗುವುದಿಲ್ಲ. ಆದರೆ ಹಾಗೆ ಮಾಡದೇ ಮಕ್ಕಳೇ ನಿಜವಾದ ಸಂಪತ್ತು ಎಂದು ತಿಳಿದು ಪ್ರತಿಯೊಬ್ಬ ತಂದೆತಾಯಿಗಳು ಮಕ್ಕಳಿಗೆ ಸಿಟ್ಟು ಮಾಡದೆ ಅವರ ಮನಸ್ಸಿಗೆ ನೋವುಂಟುಮಾಡದೆ ಪ್ರೀತಿಯಿಂದ ಮಾತನಾಡಿ ಸರಿತಪ್ಪುಗಳ ಕಲ್ಪನೆ ಮಾಡಿಕೊಟ್ಟರೆ ಮಕ್ಕಳು ಒಳ್ಳೆಯ ನಾಗರಿಕರಾಗುತ್ತಾರೆ.

ಮಕ್ಕಳಿಗೆ ಒಳ್ಳೆಯ ಪರಿಸರ, ಒಳ್ಳೆಯವರ ಗೆಳೆತನದ ಬಗ್ಗೆ ತಿಳಿಸಿ ಹೇಳಬೇಕು. ಸಾದಾ ಉಡುಪು, ಸರಳ ಜೀವನದ ಬಗ್ಗೆ ತಿಳಿಸಬೇಕು. ಮಕ್ಕಳು ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಒಳ್ಳೆಯ ನಾಗರಿಕರಾಗಲು ವಯಸ್ಸಿಗನುಗುಣವಾಗಿ ಅವರಿಗೆ ಮಾರ್ಗದರ್ಶನ ನೀಡುವುದು ಮುಖ್ಯವಾಗಿದೆ. ಶಾಲೆಗೆ ಹೋಗುವ ಮಕ್ಕಳಿಗೆ ಅವರ ಅಭ್ಯಾಸದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಎಲ್ಲ ಜವಾಬ್ದಾರಿಯನ್ನು ಶಿಕ್ಷಕರ ಮೇಲೆ ಹಾಕದೆ ತಾವು ಆಗಾಗ ಶಾಲೆಗೆ ಹೋಗಿ ಮಕ್ಕಳ ಬಗ್ಗೆ ವಿಚಾರಿಸಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕು. ಒಟ್ಟಿನಲ್ಲಿ ತಂದೆ-ತಾಯಿಯರು ಮಕ್ಕಳಿಗೆ ಎಲ್ಲ ರೀತಿಯಿಂದಲೂ ಸುವಿಚಾರಗಳನ್ನು ಬೋಧಿಸಿದ್ದೇ ಆದರೆ ಮಕ್ಕಳು ಒಳ್ಳೆಯ ನಾಗರಿಕರಾಗಲು ಸಾಧ್ಯ.

—ಎಸ್. ಆಯ್. ಉಪ್ಪಾರ, ಸಹಶಿಕ್ಷಕಿ,
ತ.ಹ. ಶಾಲೆ, ಕಲ್ಲೋಳ, ಗೋಕಾಕ.

ಇಂದಿನ ಆಧುನಿಕ ಯುಗದ ಸೂಕ್ಷ್ಮಸಂವೇದನಾ ಗುಣವುಳ್ಳ ಯಂತ್ರಮಾನವನ ಜೊತೆಗೆ, ಜೀವಂತ ಮಾನವನನ್ನು ಸಲಹಲು ಸಾಕಷ್ಟು ಅರ್ಹತೆ, ಬುದ್ಧಿಮತ್ತೆಯು ಅನಿವಾರ್ಯವೂ ಅಗತ್ಯವೂ ಆಗಿದೆ. ಹೀಗಾಗಿ ಧಾವಂತ ಜಾಗತಿಕ ಸಂದರ್ಭದಲ್ಲಿ ತಂದೆತಾಯಿಗಳ ಪಾತ್ರ ಬಹು ಹಿರಿದಾದುದಾಗಿದೆ.

ಪೋಷಕವರ್ಗ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತಮ್ಮ ಪಾಲನ್ನು ವೈಯಕ್ತಿಕ ಮಟ್ಟದಿಂದ ಹಂಚಿಕೊಂಡಾಗ ಮಾತ್ರ ಸಮಾಜದ ಸ್ವಾಸ್ಥ್ಯ ಉತ್ತಮವಾಗಿರಲು ಸಾಧ್ಯ. ಆಧುನಿಕ ಜನಾಂಗದ ಆಶೋತ್ತರಗಳನ್ನು ಇಂದಿನ ತಂದೆತಾಯಂದಿರು ಜೀರ್ಣಿಸಿಕೊಳ್ಳುವುದು ಬಹು ತ್ರಾಸದಾಯಕವಾಗಿ ಕಂಡು ಬಂದರೂ ಕೂಡ ಕಾಲಕ್ಕೆ ತಕ್ಕಂತೆ ಸ್ಪಂದಿಸುವ ಪ್ರಯತ್ನ ಇಂದು ಪೋಷಕರಲ್ಲಿ ನಡೆದಿದೆ.

ಮಕ್ಕಳ ಜೀವನಕ್ರಮವನ್ನು ರೂಪಿಸುವ ಸಂದರ್ಭದಲ್ಲಿ ಇಂದು ಮುಖ್ಯವಾಗಿ ಮುಕ್ತವಾಗಿ ಪ್ರೀತಿವಾತ್ಸಲ್ಯಗಳನ್ನು ಕೊಡುವುದರ ಜೊತೆಗೆ ಸಮಾಜದಲ್ಲಿ ತಮ್ಮ ಮಕ್ಕಳ ಸ್ಥಾನ-ಮಾನಗಳನ್ನು ಅಂದರೆ ವಾಸ್ತವ ಪರಿಸ್ಥಿತಿಯಲ್ಲಿ ತಮ್ಮತನವನ್ನು ಜೀವನದುದ್ದಕ್ಕೂ ಮಕ್ಕಳೇ ನಿರ್ಧರಿಸಿಕೊಳ್ಳುವಂತೆ, ಶಾಲೆಯ ಪರೀಕ್ಷೆಯ ಜೊತೆಗೆ ಜೀವನದ ಪರೀಕ್ಷೆಯಲ್ಲೂ ಉತ್ಸಾಹಿಗಳ ಪಟ್ಟಿಯಲ್ಲಿ ರ್‍ಯಾಂಕು ನಿರೀಕ್ಷಿಸುವಂತೆ ಮಾಡುವ ಗುರುತರವಾದ ಹೊಣೆಗಾರಿಕೆ ತಂದೆತಾಯಿಗಳ ಮೇಲೆ ಇದೆ.

ಮಕ್ಕಳನ್ನು ಯಂತ್ರಗಳಂತೆ ಉಪಯೋಗಿಸದೆ, ಸಮಾಜಮುಖಿಯಾದ ಸಾಂಸ್ಕೃತಿಕ ವಾರಸುದಾರಿಕೆಯನ್ನು ತುಂಬಿ ನಿರ್ಮಲ-ನೆಮ್ಮದಿಯ ಬದುಕಿನ ಹಾದಿಯನ್ನು ಹಾಕಿಕೊಡುವಲ್ಲಿ ತಂದೆತಾಯಿಗಳ ಪಾತ್ರ ಗಮನೀಯವಾಗಿದೆ ಎಂಬುದನ್ನು ಮೇಲ್ಕಂಡ ಅಂಶಗಳಲ್ಲಿ ಕ್ರೋಡೀಕರಿಸಲಾಗಿದೆ.

—ನಾಗೇಂದ್ರ ಪ್ರಸಾದ್, ಕೆ.ಎಸ್.,
ಮುಖ್ಯ ಶಿಕ್ಷಕರು, ಗೌರಿಬಿದನೂರು.

ವಿದ್ಯೆ ಕಲಿಸದಾ ತಂದೆ ಬುದ್ಧಿ ಹೇಳದಾ ಗುರುವು
ಬಿದ್ದಿರಲು ಬಂದು ನೋಡದಾ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ

ಮಕ್ಕಳ ಜೀವನವನ್ನು ರೂಪಿಸುವಲ್ಲಿ ತಂದೆತಾಯಿಗಳ ಪಾತ್ರ ಮಹತ್ತರವಾದುದು ಎಂದು ಸರ್ವಜ್ಞ ಅಂದೇ ತಿಳಿಸಿದ್ದಾನೆ. ಇಂದಿನ ವೇಗದ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಂದೆತಾಯಿಗಳು ಮಗುವಿನ ಜೀವನವನ್ನು ರೂಪಿಸಲು ಕೆಲವು ಅಂಶಗಳನ್ನು ಮನದಲ್ಲಿಟ್ಟುಕೊಳ್ಳಬೇಕು. ಮಗುವಿನ ಬೆಳವಣಿಗೆಯ ಕಾಲವನ್ನು ಚಿತ್ತ ಚಿಗುರುವ ಸಮಯ ಎಂದು ತಿಳಿಯಬೇಕು. ಮಗುವು ಈ ವೇಳೆಯಲ್ಲಿ ತನ್ನ ಸುತ್ತಮುತ್ತ ಉಂಟಾಗುವ, ಉದ್ಭವಿಸುವ ಪ್ರತಿಯೊಂದು ಹೊಸ ಘಟನೆಗಳನ್ನೂ ಕುತೂಹಲದಿಂದ ನೋಡುತ್ತಿರುತ್ತದೆ. ಆಗ ಮಗುವಿನ ಮನಸ್ಸಿನಲ್ಲಿ ಕುತೂಹಲಕರವಾದ ಏಕೆ? ಹೇಗೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ, ಜಿಜ್ಞಾಸೆ ಮೂಡುತ್ತದೆ. ತಂದೆತಾಯಿಗಳಾದವರು ಈ

ಪ್ರಶ್ನೆಗಳಿಗೆ ಶಾಂತಿ ಸಮಾಧಾನದಿಂದ ಉತ್ತರ ನೀಡಿ ಘಟನೆಗಳನ್ನು ಮನವರಿಕೆ ಮಾಡಿಕೊಡಬೇಕು. ತಮ್ಮ ವ್ಯವಹಾರಕ್ಕೆ ಅಡಚಣೆಗಳುಂಟಾಗುತ್ತವೆ ಎಂದು ಸಮಯವಿಲ್ಲವೆಂದು ಹೇಳುತ್ತ ವಂಚನೆ ಮಾಡಬಾರದು.

ನನ್ನ ಮಗ ಓದಿ, ಒಳ್ಳೆಯ ಉದ್ಯೋಗ ಪಡೆದುಕೊಂಡು ಹೆಚ್ಚು ಹಣ ಸಂಪಾದಿಸುತ್ತಾನೆ ಎನ್ನುವ ಭ್ರಮೆಯನ್ನು ತಂದೆ ತಾಯಿಗಳು ಬಿಡಬೇಕು. ಇದರಿಂದ ಶಿಕ್ಷಣವನ್ನು ವೃತ್ತಿಗಷ್ಟೇ ಸೀಮಿತಗೊಳಿಸಿದಂತಾಗುವುದಲ್ಲದೆ ಸ್ವಾರ್ಥ, ಭ್ರಷ್ಟಾಚಾರಗಳು ಸಮಾಜದಲ್ಲಿ ಹೆಚ್ಚುತ್ತವೆ. ನಿಷ್ಕಾಮ ಶಿಕ್ಷಣವನ್ನು ಮಕ್ಕಳಿಗೆ ಒದಗಿಸಬೇಕು. ನನ್ನ ಮಗ ಒಬ್ಬ ಪತ್ರಕರ್ತನಾಗಿ, ಸಮಾಜ ಸೇವಕನಾಗಿ, ಶಿಕ್ಷಕನಾಗಿ, ಅರ್ಥಶಾಸ್ತ್ರಜ್ಞನಾಗಿ, ವಿಜ್ಞಾನಿಯಾಗಿ, ರಾಜಕಾರಿಣಿಯಾಗಿ, ಆಧ್ಯಾತ್ಮಿಕ ವ್ಯಕ್ತಿಯಾಗಿ, ಕ್ರೀಡಾಪಟುವಾಗಿ ದೇಶಸೇವೆ ಮಾಡುವ ಒಬ್ಬ ವ್ಯಕ್ತಿಯಾಗಿ ರೂಪುಗೊಳ್ಳಲಿ ಎಂಬ ಆಸೆಯಿರಬೇಕು. —ಆರ್.ಹೇಮಂತರಾಜ್, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹೊಂಗಡಹಳ್ಳಿ, ಸಕಲೇಶಪುರ

ಇಂದು ಹೆತ್ತವರು ಮಕ್ಕಳನ್ನು ದುಬಾರಿಯಾದ ಶಾಲಾ ಕಾಲೇಜುಗಳಲ್ಲಿ ಓದಿಸುವುದರಿಂದಲೇ ಸಾರ್ಥಕತೆಯನ್ನು ಕಾಣುವ ಮಟ್ಟದಲ್ಲಿದ್ದಾರೆ. ಬರೇ ಹಣದಿಂದಲೇ ಸಮಸ್ತ ಜವಾಬ್ದಾರಿಯಿಂದಲೂ ಮುಕ್ತರಾದೇವು ಎಂದು ಭ್ರಮಿಸುತ್ತಾರೆ. ಸ್ಕೂಲಿನ ಓದು ಇಂದಿನ ಕಾಲಕ್ಕೆ ಅತ್ಯಾವಶ್ಯಕ ನಿಜವಾದರೂ ಮಕ್ಕಳು ಮನೆಯಲ್ಲಿ ಏನನ್ನು ಕಲಿಯುತ್ತಿದ್ದಾರೆ? ಎಷ್ಟು ಕಲಿತರು? ಎಂಬುದು ಗಮನಾರ್ಹವಾಗಿರುತ್ತದೆ. ಮನೆಯೇ ಮಕ್ಕಳಿಗೆ ಮೊದಲ ಶಾಲೆ.

ಉತ್ತಮ ಸಂಸ್ಕೃತಿಯಿಂದ ಕೆಳಗೆ ಜಾರುವ ಅವಕಾಶಗಳು ಇಂದು ಧಾರಾಳವಾಗಿವೆ. ಹಿರಿಯರೆನಿಸುವ ಹೆತ್ತವರೇ ಕುರುಡರಾದರೆ ಮುಗ್ಧಮಕ್ಕಳಿಗೇನು ದಾರಿತೋರಿಸಬಲ್ಲರು? ನಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ನಾವು ಗೌರವಿಸಿದರೆ, ಆಚರಿಸಿದರೆ ಮಕ್ಕಳೂ ಅವನ್ನು ತುಟಿಪಿಟಕ್ಕೆನ್ನದೆ ಒಪ್ಪಿಕೊಳ್ಳುತ್ತಾರೆ. ನೈತಿಕ ಮುಂದಾಳುಗಳು ತಮ್ಮ ಬದುಕಿನಲ್ಲಿ ತೋರಿಸಿಕೊಟ್ಟಿರುವುದನ್ನು ಆಚರಿಸಿ ನಡೆದುಕೊಳ್ಳುವುದು ತ್ರಾಸದಾಯಕ ಎಂಬುದು ನಿಜವಾದರೂ ಪರಿಣಾಮದಲ್ಲಿ ಅದು ಶ್ರೇಯಸ್ಕರ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅಳ್ತಾ ಅಳ್ತಾ ಕರ್ಮ ಮಾಡಿದರೆ ನಗ್ತಾ ನಗ್ತಾ ಸಾಯಬಹುದು, ಹಾಯ್ ಹಾಯ್ ಎಂದುಕೊಂಡು ವಿವೇಕಹೀನ ಕರ್ಮ ಮಾಡಿದರೆ ಅಳ್ತಾ ಅಳ್ತಾ ಅನುಭವಿಸಬೇಕಾಗುತ್ತದೆಂಬುದನ್ನು ನಾವು ದೊಡ್ಡವರು ನೆನಪಿನಲ್ಲಿಟ್ಟುಕೊಂಡು ವರ್ತಿಸಿದರೆ ಆಗ ನಮ್ಮ ಮಕ್ಕಳೂ ದೊಡ್ಡವರಾದಾಗ ಸುಖಶಾಂತಿ ನೆಮ್ಮದಿಯಿಂದ ಇರುತ್ತಾರೆ. ಕುಟುಂಬದ ಆರ್ಥಿಕ ಪರಿಸ್ಥಿತಿಯಲ್ಲಿ ಏರುಪೇರಾಗಬಹುದು. ಆದರೆ ನಮ್ಮ ಮಕ್ಕಳ ಸ್ವಾಸ್ಥ್ಯಕ್ಕೆ ಅಗತ್ಯವಿರುವ ಮೌಲ್ಯಗಳಲ್ಲಿ ನಾವು ಸಡಿಲಗೊಳ್ಳಬಾರದು. ಆ ಮೌಲ್ಯಗಳನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದೇ ಹೊರತು ಪಾಪದ ಮಕ್ಕಳದ್ದಂತೂ ಅಲ್ಲವೇ ಅಲ್ಲ.

—ಕೆ.ವಿ. ಭಾರತಿ, ತಗ್ಗುಂಡಿ, ತೀರ್ಥಹಳ್ಳಿ.

> **ತಾಯಂದಿರ ಕೈಯಲ್ಲಿ ಪ್ರಪಂಚದ ಭವಿಷ್ಯವೇ ಇದೆ.**
>
> —ಥಾಮಸ್ ಕಾರ್ಲೈಲ್ (Thomas Carlyle)

ಮಕ್ಕಳ ಮನಸ್ಸು ಬಹಳ ಮೃದು. ಅದು ಜೇಡಿ ಮಣ್ಣಿನ ಹಾಗೆ. ಹಿರಿಯರಾದ ನಾವು ಹೇಗೆ ಅಚ್ಚೊತ್ತುತ್ತೇವೋ, ಹಾಗೆ ಮಕ್ಕಳ ಮಾನಸಿಕ ಬೆಳವಣಿಗೆ ರೂಪುಗೊಳ್ಳುತ್ತದೆ. ಆದ್ದರಿಂದ ಮಕ್ಕಳ ಲಾಲನೆ-ಪಾಲನೆಯಲ್ಲಿ ತಂದೆತಾಯಿಗಳ ಪಾತ್ರ ಮಹತ್ತರವಾದದ್ದು. ಮಕ್ಕಳ ಕಲಿಕೆ ಹುಟ್ಟಿದ ದಿನದಿಂದಲೇ ಪ್ರಾರಂಭವಾಗುತ್ತದೆ. ಗ್ರಹಿಸುವ ಶಕ್ತಿ ಹೆಚ್ಚಾದಂತೆಲ್ಲಾ ಬೇರೆಯವರನ್ನು ಅನುಕರಣೆ ಮಾಡಿ ಹೊಸದನ್ನು ಕಲಿಯಲು ಆರಂಭಿಸುತ್ತಾರೆ. ಆಗ ತಂದೆತಾಯಿಗಳು ಉತ್ತಮ ಮಾದರಿ ಯಾಗಿ, ತಮ್ಮ ಮಕ್ಕಳ ನಡತೆಯಲ್ಲಿ ಏನೆಲ್ಲ ಒಳ್ಳೆಯದನ್ನು ಬಯಸುತ್ತಾರೋ, ಅವೆಲ್ಲವನ್ನೂ ತಾವು ರೂಢಿಸಿಕೊಂಡು ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶಕರಾಗಬೇಕಾದ್ದು ಬಹು ಮುಖ್ಯ. ಮಕ್ಕಳಿಗೆ ಪ್ರೀತಿಯ ಮಹಾಪೂರವನ್ನು ಹರಿಸಿ ಅವರಲ್ಲಿ ಆತ್ಮಸ್ಥೈರ್ಯವನ್ನು ಬೆಳೆಸಬೇಕು. ಮಕ್ಕಳು ತಪ್ಪುಮಾಡಿದಾಗ "ಈಗ ಇನ್ನೂ ಚಿಕ್ಕವರು; ದೊಡ್ಡವರಾದ ಮೇಲೆ ಅವರೇ ತಿಳಿದುಕೊಳ್ಳುತ್ತಾರೆ" ಎಂಬ ಧೋರಣೆ ಹೊಂದದೆ, ತಂದೆತಾಯಿಗಳು ತಿಳಿ ಹೇಳಿ, ಅವರನ್ನು ತಿದ್ದ ಬೇಕು. ಮಗು ನಡಿಗೆ ಕಲಿಯುವಾಗ ಹೇಗೆ ನಾವು ಅದರ ಕೈಹಿಡಿದು ನಡೆಯುವುದನ್ನು ಕಲಿಸುತ್ತೇವೋ ಹಾಗೆ ಅವರ ಎಳೆ ಜೀವನದಲ್ಲೂ ನಾವು ಜೊತೆಯಾಗಿ ನಡೆದು ಅವರಿಗೆ ತಪ್ಪು-ಸರಿಗಳ ವ್ಯತ್ಯಾಸವನ್ನು ಕಲಿಸಿ ಮುನ್ನಡೆಸಬೇಕು.

ಎಲ್ಲ ಮಾತಾಪಿತೃಗಳು ಕೆಳಗಿನ ಕೆಲವು ಅಂಶಗಳನ್ನು ಪರಿಗಣಿಸಬೇಕಾದ್ದು ಅತ್ಯಾವಶ್ಯಕ. ದಿನವೂ ಮಕ್ಕಳಿಗೆ ಒಳ್ಳೆಯ ನೀತಿಕಥೆಗಳನ್ನು ಹೇಳಿ ಸತ್ಯದ ಹಿರಿಮೆಯನ್ನು ಮನಗಾಣಿಸಬೇಕು. ದೇವರ ಪೂಜೆ ಪುರಸ್ಕಾರಗಳಲ್ಲಿ ಮಕ್ಕಳು ಭಾಗವಹಿಸುವಂತೆ ಮಾಡಿ ದೇವರಲ್ಲಿ ನಂಬಿಕೆ ಹಾಗೂ ನಿಯಮಪಾಲನೆಗಳ ಅರಿವು ಮೂಡಿಸಬೇಕು. ಸಾಮಾಜಿಕ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಮಾಡಿ ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಬಾಳಿ ಪರರಿಗೆ ನೆರವಾಗುವುದನ್ನು ಕಲಿಸಬೇಕು. ತಂದೆತಾಯಿಗಳು ತಾವು ಮಾನಸಿಕ ಹತೋಟಿ ಬೆಳೆಸಿಕೊಂಡು ತಮ್ಮ ಮಕ್ಕಳಿಗೂ ಮನಸ್ಸನ್ನು ನಿಗ್ರಹಿಸುವ ರೀತಿ-ನೀತಿಗಳನ್ನು ಚಿಕ್ಕ ವಯಸ್ಸಿನಿಂದಲೇ ಕಲಿಸಬೇಕು.

**ಈ ಲೇಖನದ ಪ್ರಾಯೋಜಕರು** : ಒಬ್ಬ ಭಕ್ತರು, ದಾವಣಗೆರೆ